### ಟಾರ್ಚ್ ಬೆಳಕು ಒಳಿತಲ್ಲ

‘ಕಪ್ಪೆಮೂತಿಯ ನಿಶಾಚರಿ ಹಕ್ಕಿ’ (ಮೇ 08, ಕೆ. ರಾಮಕೃಷ್ಣ) ಉಪಯುಕ್ತ ಮಾಹಿತಿ ಹೊಂದಿದೆ. ಆದರೆ ಹಕ್ಕಿಯ ಚಿತ್ರಗಳನ್ನು ಪ್ರಖರ ಟಾರ್ಚ್ ಬೆಳಕಿನ ಸಹಾಯದಿಂದ ತೆಗೆಯಲಾಗಿದೆ. ನಿಶಾಚರಿ ಜೀವಿಗಳ ಕಣ್ಣುಗಳಿಗೆ ರಾತ್ರಿ ಹೊತ್ತು ಈ ರೀತಿ ತೀಕ್ಷ್ಣ ಬೆಳಕು ಬೀಳುವುದರಿಂದ ಅವು ದಿಗ್ಭ್ರಮೆಯಿಂದ ಅಲುಗಾಡದೆ ಕುಳಿತುಬಿಡುತ್ತವೆ, ಅಲ್ಲದೆ ಅವುಗಳ ದೈನಂದಿನ ಚಟುವಟಿಕೆಗಳ ಮೇಲೂ ಪ್ರಭಾವ ಬೀರುತ್ತದೆ. ನಿಶಾಚರಿ ಹಕ್ಕಿಗಳನ್ನು ಕತ್ತಲಲ್ಲಿ ಟಾರ್ಚ್ ಬೆಳಕಿನಿಂದ ಚಿತ್ರೀಕರಿಸುವುದು ಅನುಚಿತ.

— ಡಾ. ನರಸಿಂಹನ್, ವಿರಾಜಪೇಟೆ

### ಅದ್ಭುತ ನೃತ್ಯ



‘ಬಾಲಿಯ ಚೆಲುವೂ ನೃತ್ಯದ ಲಯವೂ’ (ಮೇ 08, ಶಾಂತಾ ಜಯಾನಂದ) ಮಾಹಿತಿ ನೀಡಿತು. ದೇವಾಲಯದಲ್ಲಿ ಮೂರ್ತಿ ಇಲ್ಲ ಎಂಬುದನ್ನ ಓದಿದಾಗ ಆದ ಬೇಸರ, ನೃತ್ಯದ ಬಗ್ಗೆ ಓದಿದಾಗ ಮಾಯವಾಯಿತು. ಬೇರೆ ದೇಶದಲ್ಲಿ ನಮ್ಮ ರಾಮಾಯಣ ಎಂಥ ಅದ್ಭುತ ನೃತ್ಯ ಪ್ರಕಾರ!

—ಸ್ಮಿತಾ ಮೈಸೂರ ಹುಬ್ಬಳ್ಳಿ

### ‘ಸುಧಾ’ ವಿಶೇಷ

‘ಮೆಡಿಸಿನ್ ಬಾಬಾ’ (ಮೇ 08, ಪ್ರವೀಣ ಕುಲಕರ್ಣಿ) ‘ಸೆಲೆಬ್ರಿಟಿ’ ಚೆನ್ನಾಗಿದೆ. ಬಳಕೆಯಾಗದ ಔಷಧಿಗಳಿಂದಲೇ ಸಮಾಜದಲ್ಲಿ ಅಗತ್ಯವಿರುವವರಿಗೆ ಸೇವೆ ನೀಡುತ್ತಿರುವ ಓಂಕಾರನಾಥ ಶರ್ಮ ಅವರಿಗೆ ವಂದನೆ. ಇಂತಹ ಲೇಖನಗಳೊಂದಿಗೆ ‘ಸುಧಾ’ ತನ್ನ ವಿಶೇಷತೆ ಉಳಿಸಿಕೊಂಡಿದೆ.

—ಕೆ.ಜಿ. ಶ್ರೀಧರ, ಹಿರಿಯೂರು

### ತಪ್ಪು ವಿವರಣೆ

‘ಹೊನ್ನ ಗುಣದ ಹೊನ್ನೆ’ (ಮೇ 08, ರಮಣ್ ಶೆಟ್ಟಿ ರೆಂಜಾಳ) ಲೇಖನ ಹೊನ್ನೆ ಹಾಗೂ ಸುರಹೊನ್ನೆ ಎರಡು ಮರಗಳ ಮಾಹಿತಿಯ ಮಿಶ್ರಣವಾಗಿ ತಪ್ಪು ವಿವರಣೆಯಿಂದ ಕೂಡಿದೆ. ಲೇಖನದಲ್ಲಿ ಪ್ರಕಟಿಸಿರುವ ಚಿತ್ರ ಸುರಹೊನ್ನೆಯದ್ದು (calophyllum tomentosum).

ಕರಾವಳಿ ಭಾಗದಲ್ಲಿ ಕಂಡುಬರುವ ಇದನ್ನು ಕೆಲವು ಕಡೆ ‘ಹೊನ್ನೆ’ ಎಂದೂ ಕರೆಯುತ್ತಾರೆ. ಗೋಲಿ ಗಾತ್ರದ ಕಾಯಿಗಳನ್ನು ಹೊಂದಿದ್ದು, ಬಿಳಿಯ ದಪ್ಪ ಹೂಗಳಿರುತ್ತದೆ. ಆದರೆ ಹೊನ್ನೆ (pterocarpus marsupium) ಪ್ರಕಟಿಸಿರುವ ಚಿತ್ರವನ್ನು ಹೋಲುವುದಿಲ್ಲ. ಇಲ್ಲಿ ತಿಳಿಸಿದಂತೆ ಗುಣಲಕ್ಷಣಗಳು– ದಕ್ಷಿಣ ಭಾರತದಲ್ಲಿ ಸಾಗುವಾನಿ, ಬೀಟೆಯ ನಂತರ ನಾಟಾಕ್ಕೆ ಬಳಕೆಯಾಗುವುದು, ಕಾಂಡದಿಂದ ಕೆಂಪು ಅಂಟು ಒಸರುವುದು ಹಾಗೂ ಹಳದಿ ಹೂ ಬಿಡುವುದು ಈ ಬಗೆಯ ಹೊನ್ನೆಯ ಲಕ್ಷಣ.

—ವಿನು ಗಂಗೆ



## ಹಿತ್ತಲ ಹಿಂಸೆ

### ಬದಲಾವಣೆಗೆ ಕೈಗನ್ನಡಿ

‘ಹಿತ್ತಲ ಹಿಂಸೆ’ (ಮೇ 08, ಚಂಪಕಮಾಲಾ) ಮುಖಪುಟ ಲೇಖನ ಸಮಾಜದ ಕಣ್ತೆರೆಸುವಂತಿದೆ. ಇದಕ್ಕೆ ದು. ಸರಸ್ವತಿ ಹಾಗೂ ದಾಕ್ಷಾಯಣಿ ಭಟ್ ಅವರ ಅಭಿಪ್ರಾಯಗಳು ಬಲ ತುಂಬಿವೆ.

ಸ್ವಾರ್ಥದ ಭೋಗಾವಾಂಛೆಯ ಉತ್ತುಂಗದ ಮನಸ್ಥಿತಿಯಿಂದಾಗಿ, ನೈತಿಕ ಮೌಲ್ಯಗಳು ಕುಸಿದು, ಸಾಮಾಜಿಕ ಸಂಬಂಧಗಳ ಅಡಿಪಾಯವೂ ಅಭದ್ರಗೊಳ್ಳುತ್ತಿದೆ. ಮನುಷ್ಯನ ಸುಖವೇ ಮುಖ್ಯ ಅನ್ನುವ ಮನೋಭಾವದಿಂದಾಗಿ, ಹಿಂಸೆಯು ಮುನ್ನೆಲೆಗೆ ಬರುತ್ತಿರುವುದು ಬದಲಾಗುತ್ತಿರುವ ಇಂದಿನ ಸಾಮಾಜಿಕ ಜೀವನಕ್ಕೆ ಹಿಡಿದ ಕೈಗನ್ನಡಿ.

—ವಿ.ಆರ್. ಮುರಲೀಧರ್, ಬೆಂಗಳೂರು

### ಹಿಂಸಾರತಿ!

‘ಪ್ರತಿಯೊಬ್ಬ ವ್ಯಕ್ತಿಯೂ ತಾನು ಪ್ರೀತಿಸುವ ವಸ್ತುವನ್ನು ಕೊಲ್ಲುತ್ತಾನೆ!’ ಎಂಬುದು ವಿಮರ್ಶಕನೊಬ್ಬನ ಉಕ್ತಿ. ಈಗ ಅದು ಅಕ್ಷರಶಃ ದಿಟವಾಗುತ್ತಿರುವುದು ಖೇದಕರ. (ಆರತಿ ಅಲ್ಲ, ಹಿಂಸಾ–ರತಿ).

—ಸಿಪಿಕೆ, ಮೈಸೂರು

### ಇನ್ನೆಷ್ಟು ಕೊಲೆಗಳಾಗುತ್ತಿದ್ದವೋ?

‘ಹಿಂಸೆಯೆಂಬ ಮನೋಮಾಲಿನ್ಯ’ (ಮೇ 08, ಡಾ. ಎಂ. ಶ್ರೀಧರಮೂರ್ತಿ) ಲೇಖನ ಜೀವನದ ಅನೇಕ ಕಠೋರ ಸತ್ಯಗಳ ಅನಾವರಣವಾಗಿದೆ. ಸಂಬಂಧಿಗಳು ಮತ್ತು ಪ್ರೀತಿಪಾತ್ರರಾದವರಿಗೆ ತಮ್ಮ ಜೀವವನ್ನೇ ಪಣಕ್ಕಿಡುವ ಕಾಲವೊಂದಿತ್ತು. ಆದರೆ ಇಂದು ದ್ವೇಷ, ಆಸ್ತಿ, ಹಣ, ಸಂಪತ್ತುಗಳ ದುರಾಸೆಗಾಗಿ ಪ್ರೀತಿಪಾತ್ರವಾದವರನ್ನೇ ಕ್ರೂರವಾಗಿ ಕೊಲ್ಲುವಷ್ಟು ಕಾಲ ಬದಲಾಗಿದೆ.

ಸತ್ತ ಮೇಲೆ ಹೊತ್ತೊಯ್ಯಲಾರದ ಆಸ್ತಿ, ಸಂಪತ್ತು, ಧನಕ್ಕಾಗಿ ಇಷ್ಟೊಂದು ಕ್ರೌರ್ಯ, ಕೊಲೆ, ಸುಲಿಗೆಗಳಾಗುತ್ತಿದ್ದರೆ, ಒಂದು ವೇಳೆ ಅವೆಲ್ಲವನ್ನೂ ಹೊತ್ತೊಯ್ಯುವಂತಿದ್ದರೆ ಇನ್ನೆಷ್ಟು ಕೊಲೆ, ಸುಲಿಗೆಗಳು ಆಗುತ್ತಿದ್ದವೋ ಎಂಬುದನ್ನು ಊಹಿಸಲು ಸಾಧ್ಯವೇ?

—ದುಂಡಪ್ಪ ನಂದೆನ್ನವರ ಬೆಳಗಾವಿ

### ಬೇಕಿದೆ ಸುಸ್ಥಿರ ಸಮಾಜ

ಸಂದರ್ಭೋಚಿತ ಬರಹ. ಮನುಷ್ಯನ ಅವಶ್ಯಕತೆಗಳು, ಆದ್ಯತೆಗಳು ಬದಲಾಗಿವೆ, ಮಾನಸಿಕ ಸ್ವಾಸ್ಥ್ಯ ಸುಸ್ಥಿರವಾಗಿಲ್ಲ, ಜೀವನದಲ್ಲಿ ಸೋಲನ್ನು ಅರಗಿಸಿಕೊಳ್ಳುವ ಶಕ್ತಿ ಕಡಿಮೆಯಾಗಿದೆ.

ಮೊಬೈಲ್ ನೋಡಲು ಬಿಟ್ಟಿಲ್ಲ ಅಂತ ಆತ್ಮಹತ್ಯೆ ಮಾಡಿಕೊಳ್ಳುವ ಮಕ್ಕಳು, ಕೇಳಿದ್ದನ್ನ ಕೊಡ್ಲಿಲ್ಲ ಅಂತ ಜೀವ ಕಳೆದುಕೊಳ್ಳುವ ಹೆಂಡತಿ, ತಂದೆ, ತಾಯಿ, ಸ್ನೇಹಿತರನ್ನು ಕೊಲೆ ಮಾಡುವ ಹಂತಕ್ಕೆ ಹೋಗಿರುವ ಮನಸ್ಸುಗಳಿಗೆ ಬೇಕಿದೆ ಸುಸ್ಥಿರ ಸಮಾಜ. ಪ್ರೀತಿ, ಮಮತೆ, ನಂಬಿಕೆ ಎಲ್ಲವೂ ವೃದ್ಧಿಯಾಗಬೇಕಿದೆ.

—ಅನ್ನಪೂರ್ಣಮ್ಮ, ಬೆಂಗಳೂರು

### ವಿಷಾದನೀಯ

‘ಹಿತ್ತಲ ಹಿಂಸೆ’ ವಿಷಾದನೀಯ ಸಂಗತಿ. ಪ್ರಸ್ತುತ ಪರಿಸ್ಥಿತಿಯನ್ನು ಅತ್ಯಂತ ಸರಳವಾಗಿ, ಸವಿಸ್ತಾರವಾಗಿ ಎಲ್ಲಾ ಕೋನಗಳಿಂದ ವಿಮರ್ಶಿಸಿ ಎಚ್ಚರಿಕೆ ನೀಡಿದ್ದಾರೆ ಲೇಖಕರು. ಎಚ್ಚೆತ್ತುಕೊಳ್ಳಬೇಕಾದ ಸಮಯ.

—ಸಿದ್ದೇಶ್ ಎನ್.ಆರ್., ಬೆಂಗಳೂರು

### ಮೆಚ್ಚುವ ಕಾರ್ಯ

‘ಚಂದನವನದ ಮಾಹಿತಿಜೇನು’ (ಮೇ 08 ಎಂ.ಆರ್. ಮಂಜುನಾಥ್) ಚೆನ್ನಾಗಿದೆ. 80 ವರ್ಷದ ಗೋವಿಂದರಾಜು ಅವರ ಸಿನಿಮಾಸುದ್ದಿ ಸಂಗ್ರಹ ಕಾರ್ಯ ಮೆಚ್ಚುವಂಥದ್ದು. ಸಿನಿಮಾರಂಗದವರು ಇವರ ಬಳಿಯಿದ್ದ ಸಂಗ್ರಹ, ಮಾಹಿತಿ ಪಡೆದು ಇವರ ಹೆಸರನ್ನು ಪ್ರಕಟಿಸದೇ ಇರುವುದು ಬೇಸರದ ಸಂಗತಿ.

—ಓ.ವಿ. ಪ್ರಭಾಕರ, ಮಲ್ಲಾಡಿಹಳ್ಳಿ

—ಟಿ.ಎಸ್. ನಾಗರಾಜ ರಾವ್

### ಅಜ್ಜಿಮನೆ ಎಂಬ ಖುಷಿ

‘ಅಜ್ಜಿಮನೆ; ಜ್ಞಾಪಕ ಚಿತ್ರಶಾಲೆ’ (ಮೇ 08, ಸುರೇಂದ್ರ ಪೈ) ಲೇಖನದಲ್ಲಿ ಹೇಳಿದಂತೆ, ಆಗ ಸಂಬಂಧಗಳ ಮಹತ್ವ, ಪ್ರಕೃತಿಯ ಸಾಂಗತ್ಯ, ಕಲೆ, ಸಂಸ್ಕೃತಿ, ಆಟಗಳ ಖುಷಿಯನ್ನು ಮಕ್ಕಳು ಅಜ್ಜಿಮನೆಯ ಸ್ವಾನುಭವದಲ್ಲಿ ಕಂಡುಕೊಳ್ಳುತ್ತಿದ್ದರು. ಈಗ ಬೇಸಿಗೆ ಶಿಬಿರಗಳು, ಟ್ಯೂಷನ್‌ಗಳು, ತರಗತಿಗಳು ಬೇಗ ಪ್ರಾರಂಭವಾಗುವುದರಿಂದ ಅಜ್ಜಿಮನೆಗೆ ಹೋಗಲು ಆಗುವುದಿಲ್ಲ. ಅಲ್ಲಿನ ಅನುಭವಗಳ ಖುಷಿಯೂ ಮಕ್ಕಳಿಗೆ ದಕ್ಕುವುದಿಲ್ಲ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in